# ಸಾವಿನ ಸನ್ನಿಧಿಯಲ್ಲಿ ಮೆಲ್ಲನೆ ಚಿಗುರಿದ ಸಹಾನುಭೂತಿ

ಮಧ್ಯಾಹ್ನ ಸಿಟಿ ಸೆಂಟರ್‌ಗೆ ಹೋದೆ. ನನಗೆ ಗ್ಲಾಸ್ಗೋ ಸಿಟಿ ಸೆಂಟರ್ ಜೀವಂತವಾಗಿರುವಂತೆ ಭಾಸವಾಗುತ್ತದೆ. ಅದು ನನ್ನ ಬಾಲ್ಯ, ಕಿಶೋರಾವಸ್ಥೆಯನ್ನು ನೆನಪಿಸುತ್ತದೆ. ಗ್ಲಾಸ್ಗೋ ನಗರದ ಕೇಂದ್ರದಲ್ಲಿ ಸಿಟಿ ಸೆಂಟರ್, ಶಾಪಿಂಗ್ ಕೇಂದ್ರವಿದೆ. ಅದರ ಪೂರ್ವ ಭಾಗದಲ್ಲಿ ಒಂದು ಪ್ರಮುಖ ರಸ್ತೆಯಿದೆ, ದಕ್ಷಿಣದಲ್ಲಿ ಕ್ಲೈಡ್ ನದಿ ಹರಿಯುತ್ತದೆ. ನಾನು ನದಿ ತೀರದಲ್ಲಿ ಸಾಗುತ್ತಾ ರಾಬರ್ಟ್ ಬೇಥ್‌ನ ಮನೆಗೆ ಹೋದೆ. ರಾಬರ್ಟ್ ಬೇಥ್ ಒಂದು ಕಾಲದಲ್ಲಿ ನನ್ನ ನೃತ್ಯ ಶಿಕ್ಷಕನಾಗಿದ್ದ.

ನನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಶಾಲೆಯಿಂದ ತಪ್ಪಿಸಿಕೊಂಡು ಡ್ಯಾನ್ಸ್ ಪ್ರಾಕ್ಟೀಸ್‌ಗೆ ಹೋಗುತ್ತಿರುವಾಗಲೇ ನನ್ನ ಜೀವನದ ದಿಕ್ಕು ನಿರ್ಧಾರವಾಗಿತ್ತು. ಇಪ್ಪತ್ತಾರರ ರಾಬರ್ಟ್ ಬೇಥ್ 'ಸ್ಪಾರ್ಟಾ' ಹೆಸರಿನ ಡ್ಯಾನ್ಸ್ ಕ್ಲಬ್ ನಡೆಸುತ್ತಿದ್ದ. ಅವನು ಹುಡುಗರಾದ ನಮಗೆ, 'ಹುಡುಗಿಯರು ಮಾತ್ರ ಸೊಂಟವನ್ನು ಬಳುಕಿಸಲು ಸಾಧ್ಯ ಎಂದಲ್ಲ, ಹುಡುಗರು ಸಹ ಸೊಂಟವನ್ನು ಬಳುಕಿಸಬಲ್ಲರು, ವಯ್ಯಾರದಿಂದ ನಡೆಯಬಲ್ಲರು, ಹುಡುಗರು ಡ್ಯಾನ್ಸ್ ಮಾಡುವಾಗ ಅವರು ಹುಡುಗಿಯರಿಗಿಂತ ಹೆಚ್ಚು ಸೆಕ್ಸಿಯಾಗಿ ಕಾಣುತ್ತಾರೆ' ಎನ್ನುತ್ತಿದ್ದ.

ಹುಡುಗರಾದ ನಮಗೂ ನೃತ್ಯದ ಹುಚ್ಚಿತ್ತು, ಹೀಗಾಗಿ ನಾವೆಲ್ಲವನ್ನೂ ತ್ಯಜಿಸಿ ಸ್ಪಾರ್ಟಾ ಕ್ಲಬ್‌ಗೆ ಹೋಗುತ್ತಿದ್ದೆವು. ರಾಬರ್ಟ್ ಬೇಥ್ ಒಂದು ಗ್ಯಾರೇಜಿನಲ್ಲಿ ತನ್ನ ಡ್ಯಾನ್ಸ್ ಕ್ಲಬ್ ನಡೆಸುತ್ತಿದ್ದ. ಹುಡುಗರಾದ ನಮಗೆ ಡ್ಯಾನ್ಸ್ ಪ್ರಾಕ್ಟೀಸ್ ಮಾಡಿಸುತ್ತಿದ್ದ. ಋತು ಹಿತವಾಗಿದ್ದಾಗ ತೋಟವೊಂದರಲ್ಲಿ ಪ್ರಾಕ್ಟೀಸ್ ಮಾಡಿಸುತ್ತಿದ್ದ. ಯಾವುದೇ ಸಣ್ಣಪುಟ್ಟ ಕಾರ್ಯಕ್ರಮಗಳಲ್ಲಿ ನಮ್ಮ ಸೊಂಟವನ್ನು ಬಳುಕಿಸುತ್ತಿದ್ದ. ಒಮ್ಮೊಮ್ಮೆ ಸಮುದಾಯದ ಕೇಂದ್ರಗಳ ವಿಶೇಷ ಕಾರ್ಯಕ್ರಮಗಳಲ್ಲೂ ಡ್ಯಾನ್ಸ್ ಮಾಡಿಸುತ್ತಿದ್ದ. ಕೆಲವು ಮನೆಗಳ ವಿಶೇಷ ಸಂದರ್ಭಗಳಲ್ಲೂ ನಮ್ಮ ಡ್ಯಾನ್ಸ್ ಕಾರ್ಯಕ್ರಮ ನಡೆಯುತ್ತಿತ್ತು. ಹೊಸದಾಗಿ ಮನೆ ಖರೀದಿಸಿದವರು ಅಥವಾ ಹೊಸ ಕಾರನ್ನು ಖರೀದಿಸಿದವರ ಕಾರಿನೆದುರು ಸಹ ನಮ್ಮ ಡ್ಯಾನ್ಸ್ ಕಾರ್ಯಕ್ರಮ ನಡೆಯುತ್ತಿತ್ತು. ಅವನು ಗಳಿಸಿದ ಹಣದಲ್ಲಿ ನಮಗೂ ಅಲ್ಪಸ್ವಲ್ಪ ಹಂಚುತ್ತಿದ್ದ.

ನಮ್ಮ ಕೊರಿಯೊಗ್ರಾಫರ್ ರಾಬರ್ಟ್ ಅನೇಕ ಥಿಯರಿ ತರಗತಿಗಳನ್ನು ಸಹ ನಡೆಸುತ್ತಿದ್ದ; ಅನೇಕ ಪ್ರಕಾರದ ನೃತ್ಯಗಳು... ಉದಾಹರಣೆಗೆ, ಬ್ಯಾಲೆ, ಜಾಜ್, ಸಾಲ್ಸ್, ಫ್ಲಾಮೆನೊ, ಭರತನಾಟ್ಯ ಮತ್ತು ಆಧುನಿಕ ನೃತ್ಯಗಳ ಬಗ್ಗೆ ತರಬೇತಿ ಕೊಡುತ್ತಿದ್ದ. ನೃತ್ಯಕ್ಕೆ ಅನೇಕ ವರ್ಷಗಳ ಔಪಚಾರಿಕ ತರಬೇತಿಯ ಅವಶ್ಯಕತೆಯಿರುತ್ತದೆ; ಅಭ್ಯಾಸದಲ್ಲಿ ಶ್ರದ್ಧೆ ಮತ್ತು ಬದ್ಧತೆ ಇರಬೇಕಾಗುತ್ತದೆ. ಓರ್ವ ಯಶಸ್ವಿ ನರ್ತಕನಾಗಲು ಸಂತುಲನೆ, ಶಾರೀರಿಕ ಶಕ್ತಿ ಮತ್ತು ನೈಪುಣ್ಯ ಇರುವುದು ಅವಶ್ಯಕ. ಲಯದೊಂದಿಗೆ ನೃತ್ಯ ಮಾಡಬೇಕಾಗುತ್ತದೆ. ನೃತ್ಯ ಒಂದು ಸಾಧನೆಯಾಗಿದ್ದು, ಇದನ್ನು ನಮ್ಮ ದಿನಚರಿಯಲ್ಲಿ ಸೇರಿಸಿಕೊಳ್ಳಬೇಕಾಗುತ್ತದೆ.

ತಂದೆಯವರಿಗೆ ನಾನು ನೃತ್ಯ ಮಾಡುವುದು ಸುತರಾಂ ಇಷ್ಟವಿರಲಿಲ್ಲ. ಅವರು ನನ್ನ ನೃತ್ಯದ ಬಗ್ಗೆ ಹೇಳುತ್ತಿದ್ದರು, 'ನಿನ್ನ ಈ ಹುಚ್ಚು ನಿನ್ನ ಭವಿಷ್ಯವನ್ನು ಹಾಳು ಮಾಡುತ್ತದೆ, ನೀನು ಹೀಗೆ ಬೀದಿಗಳಲ್ಲಿ, ಹೊಸ ಕಾರುಗಳೆದುರು, ಹೊಸ ಮನೆಗಳ ಮುಂದೆ ನೃತ್ಯ ಮಾಡುವುದು ನಮ್ಮ ಪರಿವಾರದ ಪ್ರತಿಷ್ಠೆಗೆ ಕಳಂಕವಾಗುತ್ತದೆ.' ಈ ಬಗ್ಗೆ ಅಪ್ಪ ನನ್ನನ್ನು ಅನೇಕ ಬಾರಿ ನಿಂದಿಸಿದ್ದರು, ಕಹಿ ಮಾತುಗಳನ್ನು ಹೇಳಿದ್ದರು! ಅನೇಕ ಬಾರಿ ನನಗೂ, ಅಪ್ಪನಿಗೂ ಈ ಬಗ್ಗೆ ಜಗಳವಾಯಿತು. ಅವರು ನಾನು ನೃತ್ಯಕ್ಕೆ ಉಪಯೋಗಿಸುತ್ತಿದ್ದ ಪಾದರಕ್ಷೆಯನ್ನು ಸಹ ನನ್ನಿಂದ ಕಸಿದುಕೊಂಡಿದ್ದರು.

ಅಧ್ಯಯನದಲ್ಲಿ ನನಗೆ ಆಸಕ್ತಿಯಿರಲಿಲ್ಲ. ಹೇಗೋ ಪಾಸಾಗುತ್ತಿದ್ದೆ. ನನ್ನ ಕಿರಿಯ ತಮ್ಮ ವಿಲಿಯಮ್

